ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ:ಕಸಂವಿ/ಪರೀಕ್ಷಾಂಗ/ ಟೆಂಡರ್ಸ್-01/2019-20 ದಿನಾಂಕ: 03.09.2022.

## ಸೂಚನಾ ಪತ್ರ

**ವಿಷಯ:**- ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಆವಶ್ಯಕವಿರುವ ಪ್ರಶ್ನೆಪತ್ರಿಕೆಗಳನ್ನು ಡಿ.ಟಿ.ಪಿ ಮಾಡಲು ದರಪಟ್ಟಿಗಳನ್ನು ಆಹ್ವಾನಿಸುವುದರ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮತ್ತು ಅಧೀನ ಮಹಾವಿದ್ಯಾಲಯಗಳ 2021-22ನೇ ಸಾಲಿನ ಬಿ.ಎ.ಶಾಸ್ತ್ರೀ ಮತ್ತು ಎಂ.ಎ. ಆಚಾರ್ಯ ಪರೀಕ್ಷೆಗಳಿಗೆ ಆವಶ್ಯಕವಿರುವ ಪ್ರಶ್ನೆಪತ್ರಿಕೆಗಳನ್ನು ಡಿ.ಟಿ.ಪಿ ಮಾಡಲು ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು,ತಗುಲುವ ವೆಚ್ಚದ ದರಪಟ್ಟಿಗಳನ್ನು **ಮಾನ್ಯ ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಚಾಮರಾಜಪೇಟೆ-560018.**ಇವರ ವಿಳಾಸಕ್ಕೆ ಸೂಚನಾ ಪತ್ರವನ್ನು ಹೊರಡಿಸಿದ ದಿನಾಂಕದಿಂದ 07 ದಿನಗಳೊಳಗಾಗಿ ಕಳುಹಿಸಲು ಈ ಮೂಲಕ ಸೂಚಿಸಿದೆ ಹಾಗೂ **ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆಗಳು ಕಡ್ಡಾಯವಾಗಿ ಜಿ.ಎಸ್.ಟಿ(G.S.T)ನೋಂದಣಿ ಸಂಖ್ಯೆಯನ್ನು ಹೊಂದಿರಬೇಕೆಂದು** ಈ ಮೂಲಕ ಸೂಚಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ತರಗತಿಗಳು | ಡಿ.ಟಿ.ಪಿ ಮಾಡುವ ಒಟ್ಟು ಪ್ರಶ್ನೆಪತ್ರಿಕೆಗಳ ಸಂಖ್ಯೆ |
|---|---|---|
| 1. | ಬಿ.ಎ.ಶಾಸ್ತ್ರೀ ಮತ್ತು ಎಂ.ಎ ಆಚಾರ್ಯ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು | 245 |

**ವಿಶೇಷ ಸೂಚನೆಗಳು:**

1. ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆಗಳು ಪ್ರಶ್ನೆಪತ್ರಿಕೆಗಳನ್ನು **ಡಿ.ಟಿ.ಪಿ** ಮಾಡುವ ಕಾರ್ಯದಲ್ಲಿ ಕಡ್ಡಾಯವಾಗಿ ಗೌಪ್ಯತೆಯನ್ನು ಕಾಪಾಡಬೇಕು.
2. ಪ್ರಶ್ನೆಪತ್ರಿಕೆಗಳ ಮೇಲೆ ಪ್ರಶ್ನೆಪತ್ರಿಕೆಯ ಸಂಖ್ಯೆ, ಪರೀಕ್ಷಾ ದಿನಾಂಕ & ಸಮಯವನ್ನು ನಮೂದಿಸಬೇಕು.
3. ಪ್ರಶ್ನೆಪತ್ರಿಕೆಗಳಿಗೆ ಸಂಬಂಧಿಸಿದಂತೆ ವಿಸ್ತೃತವಾದ ವಿವರಗಳನ್ನು ಪರೀಕ್ಷಾ ವಿಭಾಗದಿಂದ ಪಡೆಯಬಹುದು.
4. ಪ್ರಶ್ನೆಪತ್ರಿಕೆಗಳ ಸಂಖ್ಯೆಯಲ್ಲಿ ಅಲ್ಪಪ್ರಮಾಣದ ಬದಲಾವಣೆಯ ಸಾಧ್ಯತೆಗಳಿರುತ್ತವೆ.
5. ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆ/ಕಂಪನಿಗೆ ಕಡ್ಡಾಯವಾಗಿ ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ಹಿಂದಿ ಭಾಷೆಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು **ಡಿ.ಟಿ.ಪಿ** ಮಾಡಿದ ಅನುಭವವಿರಬೇಕು.
6. ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆ/ಕಂಪನಿಗೆ ಕನಿಷ್ಠ 03 ವರ್ಷಗಳ ಪರೀಕ್ಷಾ ಕಾರ್ಯವನ್ನು ಯಾವುದೇ ಸಂಸ್ಕೃತ ಅಥವಾ ಇತರೆ ವಿಶ್ವವಿದ್ಯಾಲಯದಲ್ಲಿ/ಗಳಲ್ಲಿ ನಿರ್ವಹಿಸಿದ ಅನುಭವವಿರಬೇಕು ಮತ್ತು ಸಂಬಂಧಿಸಿದ ದಾಖಲೆಯನ್ನು ದರಪಟ್ಟಿಯೊಂದಿಗೆ ಸಲ್ಲಿಸಬೇಕು.

ಪರೀಕ್ಷಾ ನಿಯಂತ್ರಕರು
Controller of Exams
Karnataka Sanskrit University
PMK Road, Chamarajpet
Bangalore-560 018

ಪ್ರತಿಗಳು:-

- ಮಾನ್ಯ ಕುಲಪತಿಗಳ ಆಪ್ತಶಾಖೆ
- ಮಾನ್ಯ ಕುಲಸಚಿವರ ಆಪ್ತಶಾಖೆ
- ಹಣಕಾಸು ಅಧಿಕಾರಿಗಳ ಆಪ್ತಶಾಖೆ
- ಸೂಚನಾ ಫಲಕ